<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u>
ಶ್ರೀರಂಗಪಟ್ಟಣ.

ಸಿ.ಸಿ.ಃ 228/2018

ಪಿ. ಡಬ್ಲ್ಯು: 02
ಸಿ. ಡಬ್ಲ್ಯು: 02

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಪೂರ್ಣಿಮ |
| ತಂದೆ/ಪತಿಯ ಹೆಸರು | ಃ | ಲಕ್ಷ್ಮಣ |
| ವಯಸ್ಸು | ಃ | 29 ವರ್ಷ |
| ವೃತ್ತಿ | ಃ | ಗೃಹಿಣಿ |
| ವಾಸ | ಃ | ಜೆ.ಪಿ.ನಗರ, ಮೈಸೂರು |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 20.07.2022

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಚಾಸಾ.1 ನನ್ನ ಗಂಡ. ಆರೋಪಿಯನ್ನು ನಾನು ಈ ಮೊದಲು ನೋಡಿಲ್ಲ. ದಿಃ 18.08.2017 ರಂದು ನಾನು ಮತ್ತು ನನ್ನ ಗಂಡ ಹುಲಿಕೆರೆ ಗ್ರಾಮದಿಂದ ಮೈಸೂರು ಕಡೆಗೆ ಬೈಕ್ ನಲ್ಲಿ ಹೋಗುತ್ತಿದ್ದೆ. ನಾವು ಪಂಪ್ ಹೌಸ್ ಹತ್ತಿರ ಎಡಭಾಗದ ರಸ್ತೆಯಲ್ಲಿ ಹೋಗುತ್ತಿದ್ದಾಗ ಕೆ.ಎಸ್.ಆರ್.ಟಿ.ಸಿ. ಬಸ್ ಒಂದು ಬಂದು ನಮ್ಮ ಬೈಕ್‌ಗೆ ಡಿಕ್ಕಿ ಪಡಿಸಿದ್ದು ಅದರಿಂದ ಅಪಘಾತವಾಯಿತು. ಅಪಘಾತದಿಂದ ನನ್ನ ತಲೆಗೆ ಹಾಗೂ ಎಡಕೈಗೆ ಪೆಟ್ಟಾಗಿತ್ತು. ನನ್ನ ಗಂಡನಿಗೆ ಎಡಗೈ ಮತ್ತು ಎಡಗಾಲಿಗೆ ಪೆಟ್ಟಾಗಿತ್ತು.

ನಂತರ ಅಲ್ಲಿದ್ದ ಕೆಲವು ಜನರು ನಮ್ಮನ್ನು ಉಪಚರಿಸಿ ಆಂಬುಲೈನ್ಸ್ ಕರೆಯಿಸಿ ಕೆ.ಆರ್.ಆಸ್ಪತ್ರೆಗೆ ಮೈಸೂರಿಗೆ ಚಿಕಿತ್ಸೆಗಾಗಿ ಸೇರಿಸಿದರು. ನಂತರ ಅಲ್ಲಿಂದ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಗೆ ದಾಖಲು ಮಾಡಿದ್ದು ಅಲ್ಲಿ ಚಿಕಿತ್ಸೆ ಪಡೆದಿರುತ್ತೇನೆ.

ನಾವು ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಅಲ್ಲಿಗೆ ಪೋಲೀಸರು ಬಂದಿದ್ದು ಅವರಿಗೆ ಅಪಘಾತ ಸಂಬಂಧ ಹೇಳಿಕೆ ನೀಡಿರುತ್ತೇನೆ.

ಅಪಘಾತವಾದ ಸಮಯದಲ್ಲಿ ನನ್ನ ಗಂಡ ಓಡಿಸುತ್ತಿದ್ದ ಬೈಕ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಭಾವಚಿತ್ರದಲ್ಲಿರುವ ನಿಪಿ.3 ರಲ್ಲಿರುವ ಬೈಕ್ ನೋಡಿ ಗುರುತಿಸಿರುತ್ತಾರೆ. ಅಪಘಾತ ಪಡಿಸಿದ ಕೆ.ಎಸ್.ಆರ್.ಟಿ.ಸಿ. ಬಸ್ ನೋಡಿದರೆ ಗುರುತಿಸಲಾಗುವುದಿಲ್ಲ ಮತ್ತು ನಾನು ಅಪಘಾತವಾದ ಸಮಯದಲ್ಲಿ ನಾನು ಬಸ್ ಸಂಖ್ಯೆ ನೋಡಿಲ್ಲ.

ಅಪಘಾತ ಕೆ.ಎಸ್.ಆರ್.ಟಿ.ಸಿ. ಬಸ್ ಚಾಲಕನ ತಪ್ಪಿನಿಂದ ಆಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**<u>ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ</u>**

ದಿಃ 18.10.2017 ರಂದು ಅಪಘಾತವಾಯಿತು ಎಂದರೆ ಸರಿ.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ</u>**

ಅಪಘಾತವಾದ ದಿನವೇ ನಾನು ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ.ಅಪಘಾತ ಪಂಪ್ ಹೌಸ್ ಹತ್ತಿರ ಆಗಿದೆ ಎಂದು ಹೇಳಿಕ ನೀಡಿದ್ದೇನೆ. ನನ್ನ ಹೇಳಿಕೆಯಲ್ಲಿ ಬೈಕ್ ಹಾಗೂ ಬಸ್ ನೊಂದಣಿ ಸಂಖ್ಯೆ ಹೇಳಿಲ್ಲ. ಅಪಘಾತ ಆಗಿ ನಾವು ಕೆಳಗೆ ಬಿದ್ದಾಗ ನನಗೆ ಪ್ರಜ್ಞೆ ಇರಲಿಲ್ಲ. ಈ ವಿಚಾರವನ್ನು ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇನೆ. ಕೆ.ಆರ್.ಆಸ್ಪತ್ರೆಗೆ ನನ್ನನ್ನು ಸೇರಿಸಿದಾಗ ನನಗೆ ಪ್ರಜ್ಞೆ ಇತ್ತು. ಅಲ್ಲಿ ನಾನು ಅಪಘಾತದ ಸಮಯ ಹಾಗೂ ಸ್ಥಳವನ್ನು ವೈದ್ಯರಿಗೆ ತಿಳಿಸಿದ್ದೇನೆ. ವೈದ್ಯರಿಗೆ ನಾನು ಅಪಘಾತ ಪಂಪ್ ಹೌಸ್ ನಲ್ಲಿ ಆಗಿದೆ ಎಂದು ತಿಳಿಸಿದ್ದೇನೆ. ನಾನು ಅಪಘಾತದಿಂದ ಆದ ಗಾಯಗಳ ವಿಚಾರಕ್ಕೆ ಸಂಬಂಧಿಸಿದಂತೆ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದೇನೆ. ಬೈಕ್ ಅಪಘಾತ ನನ್ನ ಗಂಡನ ತಪ್ಪಿನಿಂದ ಆಗಿದ್ದು ಕೆ.ಎಸ್.ಆರ್.ಟಿ.ಸಿ. ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸುಳ್ಳು. ನಾವು ಪರಿಹಾರ ಪಡೆಯುವ ಉದ್ದೇಶದಿಂದ ಅಪಘಾತ ಕೆ.ಎಸ್.ಆರ್.ಟಿ.ಸಿ. ಬಸ್ ಚಾಲಕನ ತಪ್ಪಿನಿಂದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ದಿನಾಂಕದಂದು ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.